ಯುಗಾದಿ ಪ್ರಬಂಧ ಸ್ಪರ್ಧೆ 2022

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಸಂಪತ್ ಸಿರಿಮನೆ

# ಅವಮಾನಂ ಮನುಷ್ಯ ಲಕ್ಷಣಂ!



ಕೊನೆಯ ಬಾರಿ ನಿಮಗೆ ಅವಮಾನವಾಗಿದ್ದು ಯಾವಾಗ? ತೀರಾ ಮುಜುಗರದ ಸನ್ನಿವೇಶವಾಗಿ ಸುತ್ತಲಿದ್ದವರ ಕಣ್ಣುಗಳು ನಿಮ್ಮನ್ನು ಕುಕ್ಕುವಂತೆ ಕಂಡು ಕಾಲ ಕೆಳಗಿನ ನೆಲ ಕುಸಿದಿದ್ದು ಯಾವಾಗ? ಈಗಿಂದೀಗಲೇ ಇಲ್ಲಿಂದ ಅದೃಶ್ಯವಾಗಬಾರದಿತ್ತೇ ಎನ್ನುವಷ್ಟು ಮುಖಭಂಗವಾಗಿದ್ದು ಯಾವಾಗ? ನಿಮ್ಮ ಹುಡುಕುವಿಕೆ ತೀರಾ ಒಂದು ವರ್ಷಕ್ಕಿಂತಲೂ ಹಿಂದೆ ಹೋಗದಿದ್ದರೆ ಖುಷಿಪಡಿ, ಯಾಕೆಂದರೆ ನೀವುಗಳು ಪಕ್ಕಾ ಮನುಷ್ಯರಾಗಿದ್ದೀರಾ! ತೀರಾ ಆಗಾಗ ಅವಮಾನ ಮಾಡಿಸಿಕೊಳ್ಳದಿದ್ದರೆ ಆ ವ್ಯಕ್ತಿ ಮಾಮೂಲಿಯಾಗಿ ಬದುಕುತ್ತಿದ್ದಾನೆ ಎಂದು ಒಪ್ಪಿಕೊಳ್ಳಲು ಸಾಧ್ಯವೇ? ಒಮ್ಮೆ ಹೊರಗೆ ಹೋಗಿ ನೋಡಿ, ಜಗತ್ತಿನ ತುಂಬಾ ಮನುಷ್ಯರೇ ತುಂಬಿಕೊಂಡಿದ್ದಾರೆ. ಹಾಗಿದ್ದ ಮೇಲೆ ಒಬ್ಬರಿಗೊಬ್ಬರು ಅವಮಾನ ಮಾಡಿಕೊಳ್ಳದೇ ಬದುಕಲು ಸಾಧ್ಯವೇ? ವಿನ್‌ಸ್ಟನ್ ಚರ್ಚಿಲ್ ಯುನೈಟೆಡ್ ಕಿಂಗ್‌ಡಮ್ಮಿನ ಪ್ರಧಾನಿಯಾಗಿದ್ದಾಗ ಸಂಸತ್ ಸದಸ್ಯೆ ನ್ಯಾನ್ಸಿ ಆಸ್ಟರ್ ಮತ್ತು ಚರ್ಚಿಲ್ ಮಧ್ಯೆ ಆಗಾಗ ವಾದ ವಿವಾದಗಳಾಗುತ್ತಿದ್ದವಂತೆ. ಅದು ಎಷ್ಟೋ ಬಾರಿ ಪರಸ್ಪರರನ್ನು ಅವಮಾನಿಸುವ ಮಟ್ಟಕ್ಕೆ ಹೋಗುತ್ತಿತ್ತಂತೆ. ಒಮ್ಮೆ ನ್ಯಾನ್ಸಿ 'ನೀವೇನಾದರೂ ನನ್ನ ಗಂಡನಾಗಿದ್ದರೆ ನಿಮಗೆ ಕಾಫಿಯಲ್ಲಿ ವಿಷ ಹಾಕಿ ಕೊಡುತ್ತಿದ್ದೆ' ಎಂದು ಇಡೀ ಸಂಸತ್ತಿನೆದುರು ಚರ್ಚಿಲ್ಲರನ್ನು ಅವಮಾನಿಸಿದರಂತೆ. ಅದಕ್ಕೆ ತಕ್ಷಣ ಚರ್ಚಿಲ್ ಅವರು 'ಮೇಡಂ, ನೀವೇನಾದರೂ ನನ್ನ ಹೆಂಡತಿಯಾಗಿದ್ದರೆ ನಾನು ಅದನ್ನು ಕುಡಿಯುತ್ತಿದ್ದೆ' ಎಂದು ಪ್ರತಿ ಅವಮಾನ ಮಾಡಿದರಂತೆ! ಇಂತಹ ದೊಡ್ಡದೊಡ್ಡವರೇ ಪರಸ್ಪರ ಅವಮಾನ ಮಾಡಿಕೊಂಡು ಓಡಾಡುವಾಗ ನಾವು ನೀವು ಯಾವ ಲೆಕ್ಕ?

ಚಿಕ್ಕ ಮಗುವೊಂದು ರಸ್ತೆಯಲ್ಲಿ ನಡೆದು ಹೋಗುವಾಗ ಬಾಳೆಹಣ್ಣಿನ ಸಿಪ್ಪೆ ಮೆಟ್ಟಿ ಜಾರಿ ಬಿದ್ದರೆ ಅದಕ್ಕೆ ಬರೀ ನೋವಾಗುತ್ತದೆ, ಅದೇ ವಯಸ್ಕನೊಬ್ಬ ಬಿದ್ದರೆ ಅವನಿಗೆ ನೋವಿನ ಜೊತೆಗೆ ಅವಮಾನವೂ ಆಗುತ್ತದೆ. ಇದರಿಂದ ಗೊತ್ತಾಗುವುದೇನೆಂದರೆ ಮನುಷ್ಯನಿಗೆ ಹುಟ್ಟಿನೊಂದಿಗೇ ಅವಮಾನವೆನ್ನುವುದು ಬಂದಿರುವುದಿಲ್ಲ, 'ಮಾನ' ಎಂಬುದಕ್ಕೆ ಸಮಾಜ ನೀಡಿರುವ ವಿವಿಧ ವ್ಯಾಖ್ಯಾನಗಳ ಅರಿವು ಬಂದ ಮೇಲೆಯೇ ಅವನಿಗೆ ಅವಮಾನ ಆಗಲು ಸಾಧ್ಯವಾಗುವುದು. ಬೆಳವಣಿಗೆಯ ಯಾವುದೋ ಹಂತದಲ್ಲಿ ಅವನೊಂದಿಗೆ ಸೇರಿಕೊಳ್ಳುವ ಈ ಅವಮಾನ ಜೀವನದ ಕೊನೆಯವರೆಗೂ ಜೊತೆಗಿರುತ್ತದೆ. ಸತ್ತಾಗ ನಾಕು ಜನ ಬರ್ಲಿಲ್ಲ ನೋಡಿ, ಎಂಥಾ ಅವಮಾನ ಎನ್ನುವಂತೆ ಕೆಲವೊಮ್ಮೆ ಸಾವಿನ ನಂತರವೂ ಮನುಷ್ಯನ ದೇಹಕ್ಕೆ ಅವಮಾನ ಆಗುವ ಸಾಧ್ಯತೆಯಿರುತ್ತದೆ. ಅದು ಅವನಿಗೆ ಗೊತ್ತಾಗುವುದಿಲ್ಲ ಬಿಡಿ. ಆದರೆ ಬದುಕಿರುವಾಗ ಅವಮಾನಗಳನ್ನು ನಿಭಾಯಿಸುವುದು ಅಷ್ಟು ಸುಲಭವೇನಲ್ಲ.

ನನ್ನ ದೂರದ ಸಂಬಂಧಿ ಒಬ್ಬರು ಕಮಲಮ್ಮ ಎಂಬುವವರಿದ್ದರು. ಅವರು ಕುಟುಂಬದಲ್ಲಿ ಯಾವುದೇ ಮದುವೆ ಮನೆಗಳಾದರೂ ಖುಷಿಯಿಂದ ಓಡಾಟ ಮಾಡುವವರು. ಪತ್ರಿಕೆ ಹಂಚುವುದರಿಂದ ಹಿಡಿದು ಊಟಕ್ಕೆ